ದಿನಾಂಕಃ **05-02-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ವಿ.ಎ.ಜಿ.ಹೆಚ್., ದೂರುದಾರರ ಪರ ವಕೀಲರಿಂದಃ

**3.** ನಾನು ಪಿ.ಯು.ಸಿ.ವರೆಗೆ ಓದಿರುತ್ತೇನೆ. ನಿಪಿ-5 ಲೀಗಲ್ ನೋಟಿಸನಲ್ಲಿರುವ ವಿಳಾಸ ನಿಮ್ಮದೇ ಅಂದರೆ ಹೌದು. ಚೆಕ್ ನಗದೀಕರಣವಾಗದೇ ಅಮಾನ್ಯವಾದ ನಂತರ ನಿಪಿ-5 ರಂತೆ ನೋಟಿಸು ಕಳಿಸಿದ್ದು, ನಿಪಿ-7 Unclaimed ಅಂತಾ ಹೇಳಿ ನೋಟಿಸನ್ನು ವಾಪಸ್ಸು ಕಳುಹಿಸಿರುತ್ತೀರಿ ಅಂದರೆ ಹೌದು. ನಿಪಿ-7 ರಲ್ಲಿ ತೋರಿಸುವ ವಿಳಾಸದಲ್ಲಿ ಇದ್ದರೂ ಕೂಡ ಉದ್ದೇಶಪೂರ್ವಕವಾಗಿ ಪಡೆದುಕೊಂಡಿಲ್ಲ ಎಂದರೆ ಆ ವಿಳಾಸದಲ್ಲಿ ಇರಲಿಲ್ಲ. ನಿಡಿ-1 ಖರೀದಿ ಕರಾರು ಪತ್ರದಲ್ಲಿ ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಚೆಕ್‌ಗಳ ಉಲ್ಲೇಖ ಇರುವುದಿಲ್ಲ ಎಂದರೆ ಇಲ್ಲ. ಫಿರ್ಯಾದಿದಾರರು ನಿಮಗೆ 20 ವರ್ಷಗಳಿಂದ ಪರಿಚಯಸ್ಥರು ಎಂದರೆ ಹೌದು. ಫಿರ್ಯಾದಿಯ ಹಿರೇಕೆರೂರು ತಾಲೂಕ ಪುರಕೊಂಡಿಕೊಪ್ಪ ಗ್ರಾಮದಲ್ಲಿ ಜಮೀನು ವ ಅಡಿಕೆ ತೋಟ ಇದೆ ಅಂದರೆ ಗೊತ್ತಿಲ್ಲ. ಡಿ.ಸಿ.ಆಫೀಸಿನ ಹತ್ತಿರ ಅವರದು ವಾಣಿಜ್ಯ ಸಂಕೀರ್ಣ ಅಂತಾ ಕಾಂಪ್ಲೆಕ್ಸ ಇದೆ ಎಂದರೆ ಗೊತ್ತಿಲ್ಲ. ಕಾಂಪ್ಲೆಕ್ಸನಿಂದ ಅಂದಾಜು 2 ರಿಂದ 2.5 ಲಕ್ಷ ಬಾಡಿಗೆಯನ್ನು ಪಡೆದುಕೊಳ್ಳುತ್ತಾರೆ ಎಂದರೆ ಗೊತ್ತಿಲ್ಲ.

**4.** ಫಿರ್ಯಾದಿದಾರರಿಗೆ ಕಾಂಪ್ಲೆಕ್ಸನಿಂದ ಹಾಗೂ ಅಡಿಕೆ ತೋಟದಿಂದ ಸಾಕಷ್ಟು ಹಣ ಬರುತ್ತಿದ್ದರೂ ಕೂಡ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಶಿವಕುಮಾರ ಬಸವರಾಜ ಅಪ್ಪಣ್ಣನವರ ಸಾಃ ಹಾವೇರಿ ಇವರ ಪರಿಚಯ ಇದೆ ಎಂದರೆ ಹೌದು. ಇದೇ ನ್ಯಾಯಾಲಯದಲ್ಲಿ ನಿಮ್ಮ ಮೇಲೆ ಶಿವಕುಮಾರ ಅವರು ಚೆಕ್ ಬೌನ್ಸ ಕೇಸ ಹಾಕಿದ್ದರು ಎಂದರೆ ಸರಿ. ಆ ಪ್ರಕರಣದಲ್ಲಿ ನಿಮಗೆ ದೋಷಿ ಎಂದು ತೀರ್ಮಾನ ಆಗಿರುತ್ತದೆ ಎಂದರೆ ಸರಿ. ಅದರ

ಸಿ.ಸಿ.ನಂಃ 252/2018. ಆ ತೀರ್ಮಾನವನ್ನು ಪ್ರಶ್ನಿಸಿ ಅಪೀಲು ಮಾಡಿರುವುದಿಲ್ಲ. ಹಣ ನೀಡಿ ರಾಜೀ ಮಾಡಿಕೊಂಡಿರುತ್ತೇವೆ.

**5.** ಪಿರ್ಯಾದಿದಾರರಿಂದ ರೂ.9,00,000/- ಕೈಗಡ ಸಾಲ ಪಡೆದು, 2 ವರ್ಷದೊಳಗೆ ವಾಪಸ್ಸು ಕೊಡುತ್ತೇನೆ ಅಂತಾ ವಾಗ್ದಾನ ಮಾಡಿರುತ್ತೀರಿ ಎಂದರೆ ಸುಳ್ಳು. ನಿಪಿ-1 ರಂತೆ ದಿನಾಂಕಃ 29.09.2020 ರಂದು ಚೆಕ್‌ನ್ನು ನೀಡಿರುತ್ತೀರಿ ಎಂದರೆ ಸುಳ್ಳು. ಚೆಕ್ ನಗದೀಕರಣವಾಗದೇ ನಿಪಿ-2 ರಂತೆ ಬ್ಯಾಂಕ ಹಿಂಬರಹದೊಂದಿಗೆ ವಾಪಸ್ಸು ಬಂದಿದ್ದು, ಅದಕ್ಕೆ ಸಂಬಂಧಿಸಿದಂತೆ ನಿಪಿ-5 ರಂತೆ ನೋಟೀಸು ಕೊಟ್ಟಿರುತ್ತಾರೆ ಎಂದರೆ ಸುಳ್ಳು. ನೀವು ಉದ್ದೇಶಪೂರ್ವಕವಾಗಿ ನಿಪಿ-5 ನೋಟಿಸನ್ನು ಪಡೆದುಕೊಳ್ಳದೇ ಇರುವ ಕಾರಣ ನಿಪಿ-7 ರಂತೆ ವಾಪಸ್ಸು ಆಗಿರುತ್ತದೆ ಎಂದರೆ ಸುಳ್ಳು. ಭದ್ರತೆಗಾಗಿ 3 ಖಾಲಿ ಚೆಕ್‌ಗಳನ್ನು ಪಡೆದುಕೊಂಡಿರುತ್ತಾರೆ ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೀರಿ ಎಂದರೆ ಸುಳ್ಳು. ಶಿವಣ್ಣ ಹತ್ತಿ ಮತ್ತು ರಾಜು ಪಂಪಣ್ಣವರ ಪಿರ್ಯಾದುದಾರರಿಗೆ ಯಾರು ಎಂದು ಗೊತ್ತಿಲ್ಲ ಎಂದರೆ ಗೊತ್ತಿರುತ್ತಾರೆ. ಈ ಚೆಕ್‌ನ ವಿಚಾರವಾಗಿ ರಾಜೀ ಪಂಚಾಯತಿ ಮಾಡದೇ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಶಿವಣ್ಣ ಹತ್ತಿ ಮತ್ತು ರಾಜು ಪಂಪಣ್ಣವರ ನಿಮಗೆ ಆತ್ಮೀಯ ಸ್ನೇಹಿತರು ಎಂದರೆ ಹೌದು. ಪಿರ್ಯಾದಿದಾರರು ನೀಡಿದ ರೂ.9,00,000/- ಎತ್ತಿ ಹಾಕುವ ಸಂಬಂಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.